ಸಾಕ್ಷಿಯನ್ನು ದಿನಾಂಕ 07.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ಶ್ರೀ ಪಿ ಎಸ್ ಜಿ ವಕೀಲರಿಂದಃ**

ನನ್ನ ತಂದೆಯ ಹೆಸರು ಹನುಮಂತೆಗೌಡ ಹಾಗೂ ಪತ್ನಿಯ ಹೆಸರು ರಾಜಮಣಿ ಎಂದರೆ ಸರಿ. ಮಹದೇವಮ್ಮ ಕೊಂ ಬಸವೇಗೌಡ ಹಾಗೂ ನಾಗಮ್ಮ ಕೊಂ ನಾಗಮಲ್ಲೇಗೌಡ ರವರು ನನ್ನ ಸಹೋದರಿಯರು ಇರುತ್ತಾರೆ. 2011-12 ರಲ್ಲಿ ದಾವಾ ಆಸ್ತಿಯ ಖಾತೆ ನನ್ನ ಈ ಇಬ್ಬರು ಸಹೋದರಿಯರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಅದಕ್ಕಿಂತ ಮೊದಲು ದಾವಾ ಆಸ್ತಿಯ ಖಾತೆ ನನ್ನ ಹೆಸರಿನಲ್ಲಿ ಇತ್ತು ಎಂದರೆ ಸರಿ. 2010 ರಲ್ಲಿ ದಾವಾ ಆಸ್ತಿಯು ನನ್ನ ಸ್ವಾಧೀನತೆಯಲ್ಲಿ ಇದ್ದು, ನಾನೇ ಉಳುಮೆ ಮಾಡುತ್ತೇನೆ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ಸು. 4-5 ಎಕರೆ ಬೇರೆ ಜಮೀನು ಇರುತ್ತದೆ. ದಿಃ 06.03.2010 ರಂದು ನಾನು ನನ್ನ ಪತ್ನಿ ಇಬ್ಬರೂ ಸೇರಿ ದಾವಾ ಆಸ್ತಿಯ ಬಗ್ಗೆ ಆಧಾರ್ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ನಾನು ವಾದಿಯಿಂದ ಪಡೆದ ಮೂರು ಲಕ್ಷ ಸಾಲಕ್ಕೆ ಆಧಾರವಾಗಿ ಸದರಿ ಪತ್ರ ಬರೆದುಕೊಟ್ಟಿದ್ದು ತಿಂಗಳಿಗೆ ಶೇ. 1.5 ಬಡ್ಡಿ ಕೊಡುವುದಾಗಿ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ಗ್ರಾಮದ ರಾಮಯ್ಯರವರಿಂದ ಹಾಗೂ ವಾದಿಯಿಂದ ತಲಾ ಒಂದುವರೆ ಲಕ್ಷ ಹಾಗೂ ಶೇ. 1.5 ಬಡ್ಡಿಗೆ ಸಾಲ ಪಡೆದುಕೊಂಡಿದ್ದು, ಅದನ್ನು ಪಾವತಿಸಿರುವುದಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಈ ವಿಚಾರವನ್ನು ನಿಪಿ-1 ಆಧಾರ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯಿಂದ ಪಡೆದುಕೊಂಡ ಮೂರು ಲಕ್ಷ ಸಾಲವನ್ನು ಹಾಗೂ ಬಡ್ಡಿಯನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಬಡ್ಡಿ ಪಾವತಿಸುತ್ತಾ ಬಂದಿರುತ್ತೇನೆಂದು ಹೇಳುತ್ತಿದ್ದು ಆಗ ಬಗ್ಗೆ ದಾಖಲೆ ಇರುವುದಿಲ್ಲ. ನಮ್ಮ ಗ್ರಾಮದ ರಾಮಯ್ಯ ನಿಪಿ-1 ಆಧಾರ್ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಾನು ರಾಮಯ್ಯ ಹಾಗೂ ವಾದಿಯಿಂದ ತಲಾ ಒಂದುವರೆ ಲಕ್ಷ ಸಾಲ ಪಡೆದಿರುವುದಾಗಿ ಹೇಳುತ್ತಿದ್ದು, ಆದರೆ ಅವರಿಬ್ಬರ ಜಂಟಿ ಹೆಸರಿನಲ್ಲಿ ಯಾವುದೇ ಆಧಾರ್ ಪತ್ರ ಬರೆದುಕೊಟ್ಟಿರುವುದಿಲ್ಲ.

ಪತ್ರ ಬರಹಗಾರರಾದ ಎಸ್ ಸುರೇಶ್ ರವರಿಂದ ನಿಪಿ- 1 ಬರೆಸಿರುತ್ತೇವೆ ಎಂದರೆ ಸರಿ. ನಿಪಿ-1ಕ್ಕೆ ಪಿ.ಡಬ್ಲ್ಯೂ 2 ಮತ್ತು 3 ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನೇ ಪಿ.ಡಬ್ಲ್ಯೂ 2 ಮತ್ತು 3 ರವರನ್ನು ಸಾಕ್ಷಿಯಾಗಿ ಕರೆಯಿಸಿ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯಿಂದ ಪಡೆದ ಮೂರು ಲಕ್ಷ ರೂಪಾಯಿಗಳನ್ನು ಬಡ್ಡಿ ಸಮೇತ ಪಾವತಿಸಲು ವಾದಿಯು ನನ್ನಲ್ಲಿ ಹಲವಾರು ಬಾರಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಸಾಲವನ್ನು ಬಡ್ಡಿ ಸಮೇತ ಪಾವತಿಸದೇ ಇದ್ದರಿಂದ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಹಣ ಪಾವತಿಸದೇ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್
ಗುಂಡ್ಲುಪೇಟೆ